ದಿನಾಂಕಃ **09-01-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯವಿಚಾರಣೆಃ ಪ್ರತಿವಾದಿ **4** ರ ಪರ ಶ್ರೀ ಬಿ ಎಸ್ ಎನ್ ವಕೀಲರಿಂದಃ

ನಾನು ಈ ದಾವೆಯಲ್ಲಿ 4 ನೇ ಪ್ರತಿವಾದಿ ಇದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ನನ್ನ ಸ್ನೇಹಿತನ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ -3 ಎಂದು, 7 ತೆರಿಗೆ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-4 ರಿಂದ 10 ಎಂದು, 5 ತೆರಿಗೆ ಬೇಡಿಕೆಯ ದೃಢಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-11 ರಿಂದ 15 ಎಂದು, ನಮ್ಮ ಕುಟುಂಬದಲ್ಲಿ ಆದ ವಿಭಾಗ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಡಿ - 1 ಎಂದು ಗುರುತಿಸಲಾಗಿರುತ್ತದೆ. ನಿಡಿ - 1 ರಲ್ಲಿ ಸಾಕ್ಷಿ ತಮ್ಮ ತಾಯಿಯ ಸಹಿಯನ್ನು ನೋಡಿ ಗುರತಿಸಿದ್ದು ಸದರಿ ಸಹಿಗಳನ್ನು ಈಗಾಗಲೇ ನಿಡಿ-1 (ಎ) ಯಿಂದ (ಜೆ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನಿಡಿ- 1 ರಲ್ಲಿ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ- 1 (ಕೆ) ಯಿಂದ (ಎಸ್) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಾನ ಪತ್ರದ ಪ್ರತಿಯನ್ನು ತೋರಿಸಲಾಗಿ ಸದರಿ ದಾನ ಪತ್ರದಲ್ಲಿ ತಮ್ಮ ತಾಯಿಯ ಸಹಿಯನ್ನು ಈಗಾಗಲೇ ನಿಡಿ - 2 ಎಂದು ಗುರುತಿಸಲಾಗಿದ್ದು ಸದರಿ ದಾನ ಪತ್ರವನ್ನು ಈಗ ನಿಡಿ- 2(ಎ) ಎಂದು ಗುರುತಿಸಲಾಯಿತು. ನಿಡಿ- 2(ಎ) ರಲ್ಲಿ ಸಾಕ್ಷಿಯು ತಮ್ಮ ಹಾಗೂ ತಮ್ಮ ತಾಯಿಯ ಸಹಿಗಳನ್ನು ಈಗ ನಿಡಿ- 2(ಬಿ) ಯಿಂದ (ಕೆ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ